ಕೋಲಾರಪತ್ರಿಕೆ

Online Newspaper Clipping Service

**Dtd- Tuesday, 18th, September- 2018**

Page No.03

# ಮನುಷ್ಯನ ಅಹಂನಿಂದ ಪ್ರಕೃತಿ ವಿಕೋಪ: ಕಾರ್ತೀಕ್



ಕೋಲಾರ ಸೆ ೧೭: ಪ್ರಕೃತಿ ವಿಕೋಪಕ್ಕೆ ಮನುಷ್ಯನಲ್ಲಿನ ಅಹಂ ಮತ್ತು ಸ್ವಾರ್ಥ ಕಾರಣ ಎಂದು ಮಾಜಿ ಶಾಸಕ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರು ಅಭಿಪ್ರಾಯಿಸಿದರು.

ನಗರದ ಹೊರ ವಲಯದ ಟಮಕದ ದೇವರಾಜ ಅರಸು ವಿವಿಯಲ್ಲಿ ಹಮ್ಮಿಕೊಂಡಿದ್ದ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಜನ್ಮದಿನಾಚರಣೆ ಹಾಗೂ ೧೪ನೇ ಕನ್ನಡ ವಿಜ್ಞಾನ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತನ್ನು ಗೆಲ್ಲಬೇಕೆಂಬ ಹಾಗೂ ನಾನೊಬ್ಬನೇ ಎಲ್ಲ ಅನುಭವಿಸಬೇಕೆಂಬ ದುರಾಸೆ ಹೆಚ್ಚಾಗುತ್ತಿರುವುದರಿಂದ ಪ್ರಕೃತಿಯನ್ನು ಕಾಪಾಡಲು ತೊಡಕು ಉಂಟಾಗಿದೆ ಎಂದರು.

ನಾಗಸಾಕಿ ಅಣುಬಾಂಬ್ ಪ್ರಯೋಗದಿಂದ ಏನೆಲ್ಲಾ ದುಷ್ಪರಿಣಾಮಗಳಾದವು ಎಂಬುದು ಪ್ರತಿಯೊಬ್ಬರಿಗ್ತೆ ಗೊತ್ತಾಗಿದೆ. ಪ್ರಾಣಿಗಳಲ್ಲಿ ಇರುವ ಅರಿವು ಮನುಷ್ಯರಲ್ಲಿ ಇಲ್ಲವಾಗಿದೆ, ಪ್ರಾಣಿಗಳು ನೀರು ಮತ್ತು ಆಹಾರ ಸಂಗ್ರಹಣೆಗೆ ತೋರುವ ಕಾಳಜಿ ಮನುಷ್ಯರಲ್ಲಿ ಇಲ್ಲವಾಗಿದೆ. ಅಧಿಕ ಆಸ್ತಿಯನ್ನು ಗಳಿಸುವುದು ಪ್ರಮುಖ ಉದ್ದೇಶವಾಗಿದೆ ಎಂದು ವಿಷಾದಿಸಿದರು.

ಸರ್ ಎಂ.ವಿಶ್ವೇಶ್ವರಯ್ಯ ವಿಜ್ಞಾನ ಲೋಕಕ್ಕೆ ನೀಡಿರುವ ಕೊಡುಗೆ ಅಪಾರ. ಬುದ್ಧಿದೀಪ ಬೆಳಕಿನಲ್ಲಿ ಓದಿ, ಭಾರತಕ್ಕೆ ಬೆಳಕು ನೀಡಿದ ಮಹಾನ್ ವ್ಯಕ್ತಿಯ ಆದರ್ಶಗಳು ಇಂದಿನ ರಾಜಕಾರಣಿಗೆ ಆದರ್ಶವಾಗ ಬೇಕಾಗಿದೆ ಎಂದರು.

ಬೆಂಗಳೂರಿನ ಜಿಗಣಿಯ ಎಸ್.ವಿ.ವೈ.ಎಸ್.ಯ ಕುಲಪತಿ ಡಾ|| ರಾಮಚಂದ್ರ ಜಿ.ಭಟ್ ಮಾತನಾಡಿ ತರುಣರು ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಲು ನಿರಂತರ ಅಧ್ಯಯನ ಮತ್ತು ತಮ್ಮನ್ನು ತೊಡಗಿಸಿಕೊಳ್ಳುವಿಕೆ ಅಗತ್ಯವೆಂದು ಹೇಳಿದರು.

ಯುವಕರು ಪ್ರತಿಯೊಬ್ಬರಿಗೆ ಅರ್ಥವಾಗುವ ಕನ್ನಡ ಭಾಷೆಯಲ್ಲಿ ವಿಜ್ಞಾನದ ಅವಿಷ್ಕಾರ ಮಾಡಿದಾಗ ಅರಿವು ಹೆಚ್ಚಾಗಲಿದೆ ಎಂದು ತಿಳಿಸಿದರು.

ಸ್ವದೇಶಿ ವಿಜ್ಞಾನ ಆಂದೋಲನ–ಕರ್ನಾಟಕ ಸಂಸ್ಥಾಪಕ ಪ್ರೊ|| ಕೆ.ಐ.ವಾಸು, ದೇವರಾಜ ಅರಸು ವಿವಿಯ ಕುಲಪತಿ ಪ್ರೊ|| ಸಿ.ವಿ.ರಘುವೀರ್, ಗುಲ್ಬರ್ಗಾ ವಿವಿ ಕುಲಪತಿ ಪ್ರೊ|| ಪುಟ್ಟಯ್ಯ, ಬೆಂಗಳೂರು ಉತ್ತರ ವಿವಿಯ ಕುಲಸಚಿವ ಎಂ.ಎಸ್.ರೆಡ್ಡಿ, ತೋಟಗಾರಿಕೆ ಕಾಲೇಜಿನ ಡೀನ್ ಬಿ.ಜಿ.ಪ್ರಕಾಶ್ ಇದ್ದರು.